ಶ್ರೀ ಎಚ್. ಸಿದ್ದವೀರಪ್ಪ.—ನಿರ್ದಿಷ್ಟವಾಗಿ ಇಂಥ ಊರಿನಲ್ಲಿ ಆಗಿದೆಯೆಂದು ಹೇಳಿದರೆ ವಿಚಾರಿಸುತ್ತೇನೆ.

ಶ್ರೀ ಟಿ. ಹನುಮಯ್ಯ.—ಚಳ್ಳಕೆರೆ ಟ್ರೌಟ್ ಹೆಡ್ ಕ್ವಾರ್ಟರಿನಲ್ಲೇ ಹೋದ ವರ್ಷ ಇದು ನಡೆದಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆ ಆದುದು ಇದು ವರೆಗೂ ನೆನಪಿರುವುದಿಲ್ಲ.

ಶ್ರೀ ಶಿವನಂಜೇಗೌಡ.—ಹಳ್ಳಿಗಾಡಿನಲ್ಲಿ ಜಾತ್ರೆಗಳನ್ನು ಮಾಡುವಾಗಲೆಲ್ಲಾ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಕಾನೂನಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸಾಮಾನ್ಯವಾಗಿ ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ ಅಲ್ಲೇನಾದರೂ ಶಾಂತಿಗೆ ಭಂಗ ಬರುವಂಥ ಪ್ರಸಂಗವಿರಬೇಕು. ಅಂಥ ಸಂದರ್ಭಗಳಿದ್ದರೆ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಬಲಾತ್ಕಾರ ಮಾಡುತ್ತಾರೆ.

ಶ್ರೀ ಶಿವನಂಜೇಗೌಡ.—ಹಾಗಾದರೆ ದೇವಿ ಜಾತ್ರೆ ಮಾಡುವಾಗ ಸುತ್ತ ಮುತ್ತಲ ಜನರೆಲ್ಲರೂ ಒಗ್ಗಟ್ಟಾಗಿ ಯಾರನ್ನೂ ಏನೂ ಕೇಳಬೇಕಾದುದಿಲ್ಲವೆಂದು ಹೇಳಿ ಜಾತ್ರೆ ನಡೆಸುವುದಕ್ಕೇನೂ ಅಡ್ಡಿ ಇಲ್ಲ ಅಲ್ಲವೇ ?

(*No answer.*)

Cloth purchased by Government.

Q.—260. **Sri S. R. NAGAPPA SETTY** (Shimoga).—

Will the Government be pleased to state :—

(*a*) the amount of cloth purchased by Government Departments for their requirements for the years 1952-53, 1953-54 and 1954-55 ;

(*b*) the number of square yards or the amount of (*i*) mill cloth, (*ii*) handloom cloth, and (*iii*) khadi hand-spun and hand-woven ;

(*c*) whether there are any instructions from Government of India that for any cloth requirement of Government, Khadi hand-spun and handwoven should be purchased and if khadi is not available, preference may be given to hand-loom cloth ?

A.—**Sri H. SIDDAVEERAPPA** (Minister for Home and Industries).—

(*a*)

Year		Rs.	a.	p.
1952-53	...	3,98,201	4	3
1953-54	...	3,66,089	0	0
1954-55	...	1,36,791	2	6
Total	...	9,01,081	6	9

(*b*)

Year		*Mill-made* Rs.	a.	p.
1952-53	...	3,77,946	10	6
1953-54	...	3,38,780	0	9
1954-55	...	1,19,708	15	6
Total	...	8,36,435	10	9

		Hand-loom Rs.	a.	p.
1952-53	...	13,898	13	9
1953-54	...	6,321	0	0
1954-55	...	16,972	3	0
Total	...	37,192	1	0

		Khadi Rs.	a.	p.
1952-53	...	6,355	12	0
1953-54	...	20,987	15	0
1954-55	...	110	0	0
Total	...	27,453	11	0

(*c*) Government are not aware of any such instructions.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನರ್ಕಾರದ ವರು ತಮ್ಮ ಇಲಾಖೆಯವರಿಗೆ ಖಾದಿ ಮತ್ತು ಕೈಮಗ್ಗದ ಬಟ್ಟೆಗಳನ್ನೇ ಕೊಂಡುಕೊಳ್ಳಬೇಕೆಂದು ಒಂದು ಆರ್ಡರ್ ಮಾಡಿಲ್ಲವೇ ?

*ಶ್ರೀ ಎಚ್. ಸಿದ್ದವೀರಪ್ಪ.—ಮಾಡಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗಿದ್ದ ಮೇಲೆ, ಹೋದವರ್ಷ 3,66,089 ರೂಪಾಯಿಗಳ ಬಟ್ಟೆ ಕೊಂಡುಕೊಂಡಿರುವುದಕ್ಕೂ, ಈ ವರ್ಷ 1,36,791 ರೂಪಾಯಿಗಳ ಬಟ್ಟೆ ಕೊಂಡಿರುವುದಕ್ಕೂ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಈ ವರ್ಷದ ಅಂಕಿಗಳು ಅಕ್ಟೋಬರ್ ತಿಂಗಳವರೆಗೆ ಮಾತ್ರ. ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಿನಿಂದೀಚೆಗೇ ಹೆಚ್ಚಿಗೆ ಬಟ್ಟೆ ಕರ್ಚಾಗುವುದು. ಎಲ್ಲಾ ಡಿಪಾರ್ಟ್‌ಮೆಂಟುಗಳಿಗೂ ಹೆಚ್ಚು ಹೆಚ್ಚಾಗಿ ಈ ಬಟ್ಟೆಯನ್ನೇ ತೆಗೆದುಕೊಳ್ಳಬೇಕೆಂದು ಹುಕುಂ ಆಗಿದೆ. ಆದರೂ, ಈಗ ಬಂದಿರತಕ್ಕ ಅಂಕಿಅಂಶಗಳಿಂದ ಅಷ್ಟು ಹೆಚ್ಚಾಗಿ ಎಲ್ಲರೂ ತೆಗೆದುಕೊಂಡಿಲ್ಲವೆಂಬುದು ಹೊರಬಿದ್ದಿದೆ. ಆದ್ದರಿಂದ ಇನ್ನೊಂದು ಸಾರಿ ನಡಬಂಧಪಟ್ಟ ಅಧಿಕಾರಿಗಳಿಗೆ ತಿಳಿವಳಿಕೆಕೊಟ್ಟು ಇನ್ನೂ strict instructions ಕೊಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಇನ್ನು ಮುಂದೆ ನರ್ಕಾರಿ ಡಿಪಾರ್ಟ್‌ಮೆಂಟ್‌ಗಳವರೆಲ್ಲರೂ ಮಾರ್ಚ್ ತಿಂಗಳಾದ ಮೇಲೆ ಏಪ್ರಿಲ್ ತಿಂಗಳಿನಲ್ಲೇ ತಮಗೆ ಎಷ್ಟೆಷ್ಟು ಬಟ್ಟೆ ಬೇಕೆಂಬುದಾಗಿ ತಿಳಿಸುವಂತೆ ಏರ್ಪಾಡುಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಿಲ್ ಬಟ್ಟೆ ಕೊಂಡುಕೊಳ್ಳುವ ಅವಶ್ಯಕತೆ ಎಲ್ಲಿ ಇರುವುದಿಲ್ಲವೋ ಅಲ್ಲಿ ತೆಗೆದುಕೊಳ್ಳಲೇ ಕೂಡದೆಂದು ಬೇರೆ ಪ್ರಾಂತ್ಯಗಳವರೂ, ಮದ್ರಾಸ್ ಸರ್ಕಾರದವರೂ ಮತ್ತು ಕೇಂದ್ರ ಸರ್ಕಾರದವರೂ ಆರ್ಡರ್ ಮಾಡಿ ಖಾದಿ ಮತ್ತು ಕೈಮಗ್ಗದ ಬಟ್ಟೆಗಳನ್ನೇ ಕೊಂಡುಕೊಳ್ಳಬೇಕೆಂದು ಮಾಡಿರುವುದರಿಂದ ಅಲ್ಲಿ ಇಲ್ಲಿಗೆ ಹತ್ತರಷ್ಟು ಮಾರಾಟವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ನವ್ಮಲ್ಲಿ ತೆಗೆದು ಕೊಂಡಿರತಕ್ಕ ಖಾದಿ ಮತ್ತು ಕೈಮಗ್ಗದ ಬಟ್ಟೆ ಸಾಕಾದಷ್ಟಿಲ್ಲವೆಂದು ಅಂಕಿಅಂಶಗಳಿಂದ ಹೊರಬಿದ್ದಿದೆ. ಅದರ ಮೇಲೆ ಈಗ strict ಆಗಿ ಆರ್ಡರ್ ಮಾಡಿ ಖಾದಿ ಮತ್ತು ಕೈಮಗ್ಗದ ಬಟ್ಟೆಯನ್ನು ಎಲ್ಲಿ ತೆಗೆದು ಕೊಳ್ಳಬಹುದಾಗಿದೆಯೋ ಅಲ್ಲಿ ತೆಗೆದುಕೊಳ್ಳಲೇ ಬೇಕೆಂದು ಮಾಡಿರುವುದಲ್ಲದೆ, ಮಿಲ್ ಬಟ್ಟೆಯನ್ನು ಕೊಂಡು ಕೊಳ್ಳಬೇಕಾದರೆ ಸರ್ಕಾರಿ ಆರ್ಡರ್ ಪಡೆದು ಮಾಡಬೇಕೆಂದು ಆರ್ಡರ್ ಹೊರಡಿಸಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಸರ್ಕಾರದವರು ಕೊಳ್ಳುವ ಖಾದಿಯ ಬಟ್ಟೆ ಮತ್ತು ಕೈಮಗ್ಗದ ಬಟ್ಟೆಯಲ್ಲಿ ಇಂಥಿಂಥದೇ ತರಹ ಬಟ್ಟೆ ಬೇಕೆಂದು ಹೇಳಿ ಖಾದಿ ಮತ್ತು Cottage Industries ಬೋರ್ಡಿಗೆ ಮುಂಚೆಯೇ indent ಕಳುಹಿಸಿಕೊಡುವ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಯೋಚನೆ ಮಾಡುತ್ತೇವೆಂದು ಆಗಲೇ ಅರಿಕೆಮಾಡಿಕೊಂಡೆ.

Badanaval Spinning Circle.

Q.—294. **Sri P. R. RAMAIYA** (Basavangudi).—

Will the Government be pleased to state :—

(*a*) when the Badanaval Spinning Circle was started;

(*b*) the initial capital;

(*c*) the profit that the concern has made in the last five years;

(*d*) whether it is a fact that the above concern is now running at a loss;

(*e*) if so, the proposals that they have for running the concern profitably?

A.—**Sri H. SIDDAVEERAPPA** (Minister for Home and Industries).—

(*a*) In November 1927.

(*b*) Rs. 3,500.

(*c*) Nil.

(*d*) Yes.

(*e*) Hitherto, the Badanaval Spinning Circle was more or less a propagandist institution and its activities were being carried on, on an experimental basis. It is now the policy of Government that the Khadi Industry should be developed on a self-supporting basis and schemes for the development of the Badanaval Spinning Centre so as to make it self-supporting are being worked out by the Department.

Sri P. R. RAMAIYA.—I have no supplementaries, Sir.

Mr. SPEAKER.—Sri Linganna has some supplementaries to put.

Sri M. LINGANNA.—May I know, Sir, whether the Committee that has been appointed by the Government has recommended to improve this Badanaval Spinning Circle?

***Sri H. SIDDAVEERAPPA.**—Yes, Sir.

Sri M. LINGANNA.—May I know briefly the recommendations made by that Committee in respect of the Spinning Circle?

Sri H. SIDDAVEERAPPA.—I have not got the recommendations readily available. I will place them on the Table of the House later for the consideration of the Hon'ble Member.

Sri M. LINGANNA.—Is it not a fact that the recommendations are before the Government for the last two years?

Sri H. SIDDAVEERAPPA.—The recommendations of the Committee are there and we have taken steps to implement the recommendations.

Sri M. LINGANNA.—What are the steps taken to implement the recommendations of that Committee, Sir?

Sri H. SIDDAVEERAPPA.—We have tried to improve the working conditions; we have tried to improve the various other implements there; we have tried to give more cash for working expenses; and the figures will show that production has been appreciably going up.

Sri M. LINGANNA.—Is it a fact that the Committee has recommended to make the employees there as Government officers, because hitherto they are treated as semi-officials?

Sri H. SIDDAVEERAPPA.—I do not remember the recommendations of the Committee.

Cottage Industries (Schemes to Subsidise).

Q.—298. **Sri P. R. RAMAIYA** (Basavangudi).—

Will the Government be pleased to state :—